ಮಸೀದಿಗಳೂ ಇವೆ. ಇವು ಒಟ್ಟೊಮಾನ್ ಕಾಲದ ಕಟ್ಟಡಗಳು. 14ನೇ ಶತಮಾನದ ಇಂತಹ ಒಂದು ಮಸೀದಿಯನ್ನು ಪರಿವರ್ತಿಸಿ ಮ್ಯೂಸಿಯಂ ನಿರ್ಮಿಸಿದ್ದಾರೆ. 4ನೇ ಶತಮಾನದ ಚರ್ಚಿನ ಮೊಸಾಯಿಕ್ ನೆಲದ ತುಣುಕನ್ನು ಪ್ರದರ್ಶನಕ್ಕಿಟ್ಟಿದ್ದಾರೆ. ಸೋಫಿಯಾ ನಗರದ ಮಧ್ಯಭಾಗದಲ್ಲಿ, ಒಂದು ಮಸೀದಿಗೆ ಅಂಟಿಕೊಂಡಿರುವ ಎರಡು ಅಂತಸ್ತಿನ ರೋಮನ್ನರ ಪ್ರಸಿದ್ಧ ಸ್ನಾನಗೃಹದ ಅವಶೇಷಗಳಿವೆ. ಅದರ ಹಿಂಭಾಗಕ್ಕೆ ಕಣ್ಸೆಳೆವ ವಿನ್ಯಾಸದ ಹಳದಿ ಬಣ್ಣದ ವಿಶಾಲ ಕಟ್ಟಡವೊಂದಿದೆ. ಇದು ಬಲ್ಗೇರಿಯಾದ ಚರಿತ್ರೆ ತಿಳಿಸುವ 'ಹಿಸ್ಟರಿ ಮ್ಯೂಸಿಯಂ'.

## ಚರಿತ್ರೆ ಪಿಸುಗುಡುವ 'ಹಿಸ್ಟರಿ ಮ್ಯೂಸಿಯಂ'

ಮೊದಲೇ ಹೇಳಿದಂತೆ, ಬಲ್ಗೇರಿಯಾ ನೆಲವನ್ನು ಆಳಿದವರು ಬಹಳಷ್ಟು ಜನ. ಅವರೆಲ್ಲರ ಪ್ರಭಾವದ ಮಧ್ಯೆಯೂ ತಮ್ಮ ಅಸ್ಮಿತೆ ಕಾಪಾಡಿಕೊಂಡು ಬಂದು ಬಲ್ಗೇರಿಯಾ ಆಳಿದ 19–20ನೇ ಶತಮಾನದ ರಾಜ–ರಾಣಿಯರ ಕಥೆಯನ್ನು ಈ ಮ್ಯೂಸಿಯಂ ತಿಳಿಸುತ್ತದೆ. ಇಲ್ಲಿ, ಪುರಾತನ ಚರಿತ್ರೆಯನ್ನು 8 ಭಾಗಗಳಲ್ಲಿ ನೋಡಲಿಟ್ಟಿದ್ದಾರೆ.

ಸೆರ್ಡಿಕ ಸಮುಚ್ಚಯ: ನಗರದ ಮಧ್ಯದಲ್ಲಿ, ಚಾರಿತ್ರಿಕವಾಗಿ ಮಹತ್ತರವಾದ ಅವಶೇಷಗಳು ಸಿಕ್ಕರೆ ಏನು ಮಾಡಬಹುದು? ಸೋಫಿಯಾ ನಗರದಲ್ಲೂ ಬೃಹತ್ ಗಾತ್ರದ ಸಚಿವಾಲಯಗಳು, ಆಡಳಿತ ಕೇಂದ್ರಗಳು, ರೈಲ್ವೆ ಹಳಿ, ಜನನಿಬಿಡ ರಸ್ತೆಗಳಿರುವ ನೆಲದ ಕೆಳಗೆ ಅತ್ಯಂತ ಮಹತ್ತರ ರೋಮನ್ನರ ಕಾಲದ ಕಟ್ಟಡದ ಅವಶೇಷಗಳಿವೆ. ಇವನ್ನು ಸಂಭಾಳಿಸಿರುವ ರೀತಿಯೇ ಅನನ್ಯ.

ಸೆರ್ಡಿಕ, 4–6ನೇ ಶತಮಾನದಲ್ಲಿ ಇತ್ತು ಎನ್ನಲಾದ ಪ್ರಾಚೀನ ರೋಮನ್ನರ ನಗರ. ಸೋಫಿಯಾ ನಗರದಲ್ಲಿ ಮೆಟ್ರೊ ನಿಲ್ದಾಣ ನಿರ್ಮಿಸಲು 2010–2012ರಲ್ಲಿ ನೆಲ ಅಗೆಯುತ್ತಿದ್ದಾಗ ಪ್ರಾಚೀನ ನಗರದ 8 ರಸ್ತೆಗಳು, ಒಂದು ಬೆಸಿಲಿಕ, ಮನೆಗಳು, ಸ್ನಾನಗೃಹಗಳ ಅವಶೇಷಗಳು ದೊರಕಿವೆ. ಈ ಅವಶೇಷಗಳನ್ನು ಗಾಜಿನ ಹಾಸಿನ ಕೆಳಗೆ ಸಂರಕ್ಷಿಸಿಡಲಾಗಿದೆ. ಅಂದರೆ, ಒಂದು ನಗರದ ನೆಲದಾಳದಲ್ಲಿ ಮತ್ತೊಂದು ನಗರವನ್ನು ಇಲ್ಲಿ ಕಾಣಬಹುದು. ಈ 22ನೇ ಶತಮಾನದಲ್ಲಿ 4ನೇ ಶತಮಾನದ ಬೀದಿಗಳಲ್ಲಿ ತಿರುಗಾಡಿದಂತಾಗುತ್ತದೆ. ಚರಿತ್ರೆಯ ಒಂದು ಪದರದ ಮೇಲೆ ಮತ್ತೊಂದು ಮಜಲಿನ ಚರಿತ್ರೆಗಳನ್ನು ಮನುಷ್ಯ ಬರೆದಿರುವುದು ನೋಡಸಿಗುತ್ತದೆ. ಅದರ ಮತ್ತೊಂದು ಉದಾಹರಣೆ, ಪ್ಲಾವ್ಡಿವ್ ಎನ್ನುವ ನಗರದಲ್ಲಿದೆ.

## ಸಾಂಸ್ಕೃತಿಕ ರಾಜಧಾನಿ ಪ್ಲಾವ್ಡಿವ್

ಪ್ಲಾವ್ಡಿವ್ ನಗರವನ್ನು ಬಲ್ಗೇರಿಯಾದ ಸಾಂಸ್ಕೃತಿಕ ರಾಜಧಾನಿ ಎನ್ನಬಹುದು. 2019ರಲ್ಲಿ ಈ ನಗರಕ್ಕೆ ಯೂರೋಪಿಯನ್ ಸಾಂಸ್ಕೃತಿಕ ನಗರಿಯೆಂಬ ಪಟ್ಟ ದೊರಕಿತು. ಯುನೆಸ್ಕೊ ಶೈಕ್ಷಣಿಕ ನಗರಗಳ ಪಟ್ಟಿಯಲ್ಲಿ ಪ್ಲಾವ್ಡಿವ್ ನಗರವೂ ಇದೆ. ಮರಿಟ್ಸಾ ನದಿ ತಪ್ಪಲಿನ ಏಳು ದಿಬ್ಬಗಳ



ಬಲ್ಗೇರಿಯಾದ 'ಓಲ್ಡ್ ಟೌನ್'ನಲ್ಲಿ ರಿನೈಸನ್ಸ್ ವಾಸ್ತುಶಿಲ್ಪ ವಿನ್ಯಾಸದಲ್ಲಿನ ಬಣ್ಣಬಣ್ಣದ ಮನೆಗಳು

ನಡುವೆ ಬೆಳೆದ ನಗರವಾದ ಕಾರಣ, 'ಏಳು ಬೆಟ್ಟಗಳ ನಗರ'ವೆಂಬ ಹೆಸರು ಪಡೆದಿದೆ. ಇಲ್ಲಿಂದ ಯೂರೋಪಿನ ಹಲವು ದೇಶಗಳಿಗೆ ಸಾರಿಗೆ ಇದ್ದು, ಈ ನಗರಕ್ಕೆ ಟರ್ಕಿ, ರೊಮಾನಿಯಾ ಇತ್ಯಾದಿ ದೇಶಗಳಿಂದ ಪ್ರವಾಸಿಗರು ವಾರಾಂತ್ಯ ಬಂದು ಹೋಗುವುದಿದೆ.

ಆದಿಮಾನವರು ಇಲ್ಲಿ ಕ್ರಿ.ಪೂ. 6ನೇ ಶತಮಾನದಲ್ಲೇ ನೆಲೆಯೂರಿದ್ದರೆಂಬುದಕ್ಕೆ ಸಾಕ್ಷಿಗಳು ದೊರೆತಿವೆ. ಮುಂದೆ ಮೆಸೆಡೋನಿಯ, ಸೆಲ್ಟಿಕ್, ರೋಮನ್, ರಷ್ಯನ್ನರು, ಗೊತ್, ಹನ್ನರು, ಬಲ್ಗೇರಿಯನ್ನರು, ಸ್ಲೊವೇನಿಯಾದವರು, ಟರ್ಕಿಯ ಒಟ್ಟೊಮನ್ನರು – ಹೀಗೆ ಹಲವರು ಈ ನಗರವನ್ನು ತಮ್ಮದಾಗಿ ಮಾಡಿಕೊಂಡು ಆಳಿದ್ದಾರೆ. ಅಲೆಕ್ಸಾಂಡರಿನ ತಂದೆ ಫಿಲಿಪ್ ದಿ ಗ್ರೇಟ್ (359–336 ಬಿಸಿಇ) ಈ ನಗರದ ನಿಯಂತ್ರಣಕ್ಕಾಗಿ ಯುದ್ಧ ಮಾಡಿದ್ದಾನೆ. ಪ್ರತಿಯೊಬ್ಬರೂ ಇನ್ನೊಬ್ಬರು ಕಟ್ಟಿದ ನಗರವನ್ನು ಧ್ವಂಸ ಮಾಡಿ ಅದೇ ಜಾಗದಲ್ಲಿ ಹೊಸ ಸಾಮ್ರಾಜ್ಯ ಕಟ್ಟಿದ್ದಾರೆ.

ಈ ನಗರ ರೋಮನ್ನರ ಕಾಲದಲ್ಲಿ ಫಿಲ್ಲಿಪೋಲಿಸ್ ಎನ್ನುವ ಆಕರ್ಷಕ ರೋಮನ್ನರ ಗುಡಿ ಹೊಂದಿತ್ತು. ಅದರ ಅವಶೇಷಗಳ ಉತ್ಖನನ ನಡೆದಾಗ ಬಲ್ಗೇರಿಯನ್ನರಿಗೆ ಆಘಾತ ಕಾದಿತ್ತು. ಒಂದು ತಳಪಾಯದ ಮೇಲೆ ಮತ್ತೊಂದು ತಳಪಾಯ ಕಂಡುಬಂದಿತು. ಒಂದು ಕಾಲದ ಮೊಸಾಯಿಕ್ ಮೇಲೆ ಮತ್ತೊಂದು ಪದರದ ಮೊಸಾಯಿಕ್ ನೆಲ ತೆರೆದುಕೊಂಡಿತು. ಸಮಾಧಿಗಳ ಮೇಲೆ ಸಮಾಧಿಗಳು ಕಂಡವು. ಪ್ರತಿ ರೋಮನ್ ರಾಜನ ಕಾಲದಲ್ಲಿ ಒಬ್ಬರು ಇನ್ನೊಬ್ಬರ ಕಟ್ಟಡ ಉರುಳಿಸಿ, ತಳಪಾಯವನ್ನು ಹಾಗೇ ಬಿಟ್ಟು ಹೊಸ ವಿನ್ಯಾಸದ ಕಟ್ಟಡಗಳನ್ನು ಅದೇ ಜಾಗದಲ್ಲಿ ಕಟ್ಟಿರುವುದು ಕಂಡುಬಂತು.

ಹಿಂದಿದ್ದ ಅಗಾಧ ಗಾತ್ರದ ಫಿಲಿಪೋಲಿಸ್ ಕಟ್ಟಡದ ತಳಪಾಯ ಈಗ ನೆಲದಡಿಯಲ್ಲಿ ಗಾಜಿನ ಪದರಗಳ ಕೆಳಗೆ ಸಂರಕ್ಷಿತವಾಗಿದೆ. ಅದರ ಅಳತೆಯಿಂದಲೇ ಆ ಜಾಗದಲ್ಲಿ ಹಿಂದೆ



ಬಲ್ಗೇರಿಯಾ ಚರಿತ್ರೆ ಕಾಪಿಟ್ಟುಕೊಂಡಿರುವ 'ಹಿಸ್ಟರಿ ಮ್ಯೂಸಿಯಂ'

ಎಂಥ ಬೃಹತ್ ಕಟ್ಟಡವೊಂದು ನಿಂತಿತ್ತು ಎಂಬ ಅಂದಾಜು ಸಿಗುತ್ತದೆ. ಅದನ್ನು ಕಣ್ಣಾರೆ ಕಾಣುವ ಡಿಜಿಟಲ್ ಸಾಧನಗಳನ್ನು ಇಲ್ಲಿ ಪ್ರವಾಸಿಗರಿಗಾಗಿ ಅಳವಡಿಸಿದ್ದಾರೆ.

ಪ್ಲಾವಡಿವ್ ಆಳುತ್ತಿದ್ದ ರಾಜರು ಬದಲಾದಂತೆ ನಗರದ ಹೆಸರೂ ಬದಲಾಗುತ್ತ ಬಂದಿದೆ. ಗ್ರೀಕರು ಒಡ್ರಿಸ್ಸಾ ಅಥವಾ ಓಡ್ರಿನ್ ಎಂದು ಕರೆದರೆ, ಹಲವು ನೂರು ವರ್ಷಗಳ ನಂತರ ಬಂದ ಮತ್ತೊಂದು ತಲೆಮಾರಿನ ಗ್ರೀಕರು ಕೆಂಡ್ರಿಸ್ಸ ಎಂದು ಕರೆದರಂತೆ. ರೋಮನ್ನರು ಟ್ರಿಮೊಂಟಿಯಮ್ (ಮೂರು ಬೆಟ್ಟಗಳ ನಗರ) ಎಂತಲೂ, ಇತರೆ ದೊರೆಗಳು ಫಿಲಿಪ್ಪೋಪೊಲಿಸ್, ಅಂದರೆ ಫಿಲಿಪ್ಪನ ಸಿಟಿ ಎಂದೂ ಉಲ್ಲೇಖಿಸಿದ್ದಾರೆ. ಜೋರ್ಡನ್ನರು ಪುಲ್ಪುದೇವ (ಲೇಕ್ ಸಿಟಿ) ಎಂದು ಕರೆದ ನಂತರ ಅದೇ ಹೆಸರು ನಾನಾ ರೀತಿ ಭಿನ್ನಗೊಂಡು ಪ್ಲೇಡಿವ್, ಪಪಾಲ್ಡಿವ್, ಪ್ಲಾವಡಿವ್, ಪ್ಲಾಪ್ಡಿವ್ ಕೊನೆಗೆ ಇಂದಿನ ಪ್ಲಾವ್ಡಿವ್ ಎಂದಾಗಿದೆ.